ಹಳ್ಳಿಗಾಡಿನ ಮಕ್ಕಳು. ಜೀವನದಲ್ಲಿ ದಿಗ್ಗಜ ಲೇಖಕರನ್ನಂತೂ ನೋಡಲು ಸಾಧ್ಯವಿಲ್ಲ. ನೀವಾದರೂ ಬಂದರೆ ಹೊಳೆಯಿಲ್ಲದ ಊರಿಗೆ ಹಳ್ಳವಾದರೂ ಹರಿದಂತೆ, ಸೂರ್ಯನಿಲ್ಲದ ಕಡೆ ಹಣತೆಯಾ ಹೊತ್ತಿಸಿದಂತೆ. ನಿಮ್ಮ ಬರವು ಎಮ್ಮ ಜೀವಾಳದ ಬರವು ಕಾಣಿರಯ್ಯ' ಎಂದು ಕಾವ್ಯಾತ್ಮಕ ಪತ್ರ ಬರೆದಿದ್ದರು. ಪತ್ರದಲ್ಲಿದ್ದ ಉಪಮೆಗಳ ಧ್ವನ್ಯಾರ್ಥವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, 'ಇದು ನನ್ನ ಸೇವೆಯ ಕೊನೇ ವರ್ಷ' ಎಂಬ ಆರ್ತಸಾಲಿಗೆ ಕರಗಿ ನೀರಾಗಿ ಹೋದೆ. ಸದರಿ ಅಧ್ಯಾಪಕರು ನನ್ನನ್ನು ತಮ್ಮ ಶಿಷ್ಯರಿಗೆ ಪರಿಚಯಿಸಿದ್ದು ಹೀಗಿತ್ತು: 'ನಿಮ್ಮ ಪುಸ್ತಕದೊಳಗ ಪ್ರವಾಸ ಕಥನದ ಪಾಠ ಐತಲ್ಲ? ಅದನ್ನ ಬರದ ಲೇಖಕರನ್ನ ನಾ ರಿಟೈರ್ ಆಗೋದರೊಳಗ ತೋರಸ್ತೀನಿ ಅಂತ ವಚನಾ ಕೊಟ್ಟಿದ್ನಲ್ಲಾ? ಇಗಾ ನೋಡ್ರಿ, ಇವರೇ ಆ ಲೇಖಕರು. ಕಣ್ತುಂಬ ತುಂಬಕೊರಿ. ಬೇಕಾದ ಪ್ರಶ್ನೆ ಕೇಳ್ರಿ. ಭಾಷಣ ಗೀಷಣ ಇರಂಗಿಲ್ಲ. ಅಂಜಬ್ಯಾಡರಿ.' ಮಕ್ಕಳು ತಮಗಿದ್ದ ನನ್ನ ಪಾಠವನ್ನು ನನ್ನಿಂದಲೇ ಓದಿಸಿದರು. ಆಟೋಗ್ರಾಫ್ ಹಾಕಿಸಿಕೊಂಡರು. ಈ ಭಾಗ್ಯ ಎಷ್ಟು ಲೇಖಕರಿಗೆ ಸಿಕ್ಕಿದೆಯೊ?

ಭಾಷಣಪೂರ್ವ ಮೆರವಣಿಗೆಯಲ್ಲಿ ಸಾಧ್ಯವಾದಷ್ಟೂ ನಾನು ನಡೆದುಕೊಂಡೇ ಹೋಗುತ್ತೇನೆ. ಟ್ರ್ಯಾಕ್ಟರ್ ಏರುವುದಿಲ್ಲ. ಒಮ್ಮೆ ಕಾರ್ಯಕ್ರಮವೊಂದರಲ್ಲಿ ಎರಡು ಮೈಲುದ್ದದ ಮೆರವಣಿಗೆ ಇತ್ತು. ಅದರಲ್ಲಿ ಹಲವಾರು ಸೋಗುಗಳು. ನಂದಿಕೋಲು, ವೀರಗಾಸೆ, ಶಹನಾಯಿ. ನನ್ನ ಜತೆಯಿದ್ದ ಸ್ಥಳೀಯ ಶಾಸಕರನ್ನು ಸಂಪ್ರೀತಗೊಳಿಸಲೆಂದೊ ಏನೊ, ಬಜಾರು ಬೀದಿಯುದ್ದಕ್ಕೂ ಅಂಗಡಿ ಮಾಲೀಕರು ನಿಲ್ಲಿಸಿ ನಿಲ್ಲಿಸಿ ಶಾಲು ಹಾಕಿದರು. ನನ್ನ ಮುಖದಲ್ಲಿ ಭರ್ಜರಿ ವ್ಯಾಪಾರ ಮಾಡಿದ ಕಳೆ ತುಂಬಿತು. ಹಾಕಿದ ಹಾರ ಶಾಲುಗಳನ್ನು ಕೂಡಲೇ ಕೊರಳಿಂದ ಜೋಪಾನವಾಗಿ ತೆಗೆದು ಸಂಗ್ರಹ ಮಾಡುವುದಕ್ಕೆ ಜತೆಗೆ ಹಸನ್ಮುಖದ ಸ್ವಯಂ ಸೇವಕ ಜತೆಗಿದ್ದನು. ಮೆರವಣಿಗೆ ಮುಗಿದು ಸಭಾಭವನ ಪ್ರವೇಶಿಸುವಾಗ ಕಿರುಗಣ್ಣಲ್ಲಿ ಗಮನಿಸಿದೆ–ಸ್ವಯಂಸೇವಕನ ಚಾಚಿದ ತೋಳಿನಲ್ಲಿ ಹದಿನೈದಕ್ಕಿಂತ ಹೆಚ್ಚಿನ ಶಾಲುಗಳು. ಕಟ್ಟಿದರೆ ಒಂದು ಹೊರೆ. ಧನ್ಯತಾ ಭಾವದಿಂದ ವೇದಿಕೆಯನ್ನೇರಿದೆ. ಭಾಷಣ ಒಯಿನಾಗೇ ಆಯಿತು. ಹೊರಡುವ ಸಮಯಕ್ಕೆ ಸಂಘಟಕರು ಫಲಕ ಹಾರ ಶಾಲುಗಳನ್ನು ಪ್ಯಾಕು ಮಾಡುತ್ತಿದ್ದರು. 'ಬೆಳಿಗ್ಗೆ ಮೆರವಣಿಗೆಯಲ್ಲಿ ಬಿದ್ದ ಶಾಲುಗಳನ್ನು ಇದೇ ಬ್ಯಾಗಿಗೆ ಹಾಕರಪ್ಪಾ' ಎಂದೆ. 'ಸಾ. ನಿಮ್ಮವರೇ ಯಾರೊ ಒಬ್ಬರು ಅವನ್ನೆಲ್ಲ ಕಲೆಕ್ಟ್ ಮಾಡ್ಕೊಂಡು ಹೋದರಲ್ಲ?' ಎಂದು ಅವರು ಖೇದಾಶ್ಚರ್ಯ ಪ್ರಕಟಿಸಿದರು. ಎಲಾ ಶಾಲುಚೋರ! ಮದುವೆ ಊಟಕ್ಕೆ ಬಂದ ಅಪರಿಚಿತ 'ಅವರ ಕಡೆಯವನಿರಬಹುದು' ಎಂದು ಎರಡೂ ಕಡೆಯವರಿಂದ ಉಪಚಾರ ಪಡೆದಂತಾಗಿತ್ತು. 'ನಮ್ಮೂರ ಫಂಕ್ಷನ್ನಿಗೆ ಪಕ್ಕದ ಊರಿಂದ ಜೇಬುಗಳ್ಳರು ಬರೋ ಪದ್ಧತಿ ಮೊದಲಿಂದಲೂ ಇದೆ. ಹೆಂಗನ ಇರಲಿ, ಒಂಸಲ್ ಜೇಬ್ ಚೆಕ್ ಮಾಡಿಕೊಳ್ಳಿ' ಎಂದರು. ದೊಡ್ಡ ಮೊತ್ತವೇನೂ ಇಟ್ಟಿರಲಿಲ್ಲ. ಕೂಡಲೇ ಜುಬ್ಬದ ಜೇಬಿಗೆ ಕೈಹಾಕಿದೆ. ಕೈ ನೀರಲ್ಲಿ ಕೋಲುಹೋದಂತೆ ಸರಾಗವಾಗಿ ಜೇಬನ್ನು ಪಾರುಮಾಡಿ ಹೊರಗೆ ಹೊರಟಿತು: 'ವಿಧಿ ಬದುಕಿನುದ್ದಕ್ಕೂ ತ್ರಾಸಕೊಟ್ಟಿತು; ಸತ್ತಾಗ ಗೋರಿಗೆ ಗರಸು ನೆಲವನ್ನೇ ಕರುಣಿಸಿತು.'

ಒಂದು ಮೆರವಣಿಗೆ ಇದಕ್ಕಿಂತ ವಿಶಿಷ್ಟ ಅನುಭವ ಕೊಟ್ಟಿತು. ಎಂಜಿನಿಯರಿಂಗ್ ಕಾಲೇಜಿನದು. ಪೂರ್ವದಿಂದಲೂ ಅಲ್ಲಿ ಕೆಲವು ರಿವಾಜುಗಳಿದ್ದವು. ಭುವನೇಶ್ವರಿ ಪಟಕ್ಕೆ ಪುಷ್ಪಾರ್ಚನೆ, ಅತಿಥಿಗೆ ಕುಚ್ಚಿನ ಪೇಟ, ಸಾರೋಟಿನಲ್ಲಿ ಮೆರವಣಿಗೆ, ಮಂಗಳವಾದ್ಯ, ನಡುನಡುವೆ ಲಕ್ಷ್ಮಿಪಟಾಕಿ ರೋಡಿನ ಮೇಲಿಟ್ಟು ಹಾರಿಸುವುದು ಇತ್ಯಾದಿ. ನಾನು ಹೋದಾಗ